RNU AIR DHARWAD

NOVEMBER 09, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- 'ಎಲ್ಲರಿಗೂ ನ್ಯಾಯ: ಸನ್ನಿವೇಶ ಏನೇ ಇರಲಿ', ಧ್ಯೇಯದೊಂದಿಗೆ, ಇಂದು 'ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ.
- ಇನ್‌ಸ್ಪೈರ್ ಮಾನಕ್: ಜಪಾನಿನ ಅಂತಾರಾಷ್ಟ್ರೀಯ ಅಕುರಾ ವಿಜ್ಞಾನ ಸಮ್ಮೇಳನಕ್ಕೆ, ರಾಜ್ಯದ 9 ವಿದ್ಯಾರ್ಥಿಗಳು ಆಯ್ಕೆ.
- ಇಂದು, ದೀಪಾವಳಿ ಸೋಮಾವತಿ ಅಮಾವಾಸ್ಯೆ: ಕಾರ್ತಿಕ ಮಾಸದ ಆರಂಭ.
- ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಗೆ, ಚುನಾವಣಾ ಆಯೋಗದಿಂದ, ಸಿದ್ಧತೆ ಆರಂಭ.

<><><>

ಈಗ ವಾರ್ತೆಗಳ ವಿವರ

<><><>

1987ರ, 'ಕಾನೂನು ಸೇವೆಗಳ ಪ್ರಾಧಿಕಾರ ಕಾಯ್ದೆ'ಯನ್ನು ಸ್ಮರಿಸಲು, ದೇಶಾದ್ಯಂತ ಇಂದು, 'ರಾಷ್ಟ್ರೀಯ ಕಾನೂನು ಸೇವೆಗಳ ದಿನ'ವನ್ನು ಆಚರಿಸಲಾಗುತ್ತಿದೆ. ಈ ಕಾಯ್ದೆ, ನವೆಂಬರ್ 9, 1995 ರಲ್ಲಿ ಜಾರಿಗೆ ಬಂದಿತು. 'ಎಲ್ಲರಿಗೂ ನ್ಯಾಯ: ಸನ್ನಿವೇಶ ಏನೇ ಇರಲಿ' ಎಂಬ ಸಂದೇಶದೊಂದಿಗೆ, ಉಚಿತ ಕಾನೂನು ನೆರವು ಒದಗಿಸುವ ಮತ್ತು ಎಲ್ಲರಿಗೂ ಸಮಾನ ನ್ಯಾಯ ಕಲ್ಪಿಸುವ ಧ್ಯೇಯದೊಂದಿಗೆ, ಈ ದಿನವನ್ನು ಆಚರಿಸಲಾಗುತ್ತಿದೆ.

<><><>

ಕಾನೂನು ನೆರವು ವ್ಯವಸ್ಥೆ, 44 ಲಕ್ಷ 22 ಸಾವಿರ ಜನರನ್ನು ತಲುಪಿದ್ದು, ಲೋಕ ಅದಾಲತ್‌ಗಳ ಮೂಲಕ, 23 ಕೋಟಿ 58 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಲಾಗಿದೆ.

<><><>

'ದಿಶಾ' ಯೋಜನೆಯ ಮೂಲಕ, 2 ಕೋಟಿ 10 ಲಕ್ಷ ಜನರಿಗೆ, ವ್ಯಾಜ್ಯಪೂರ್ವ ಸಲಹೆ, ಉಚಿತ ಕಾನೂನು ಸೇವೆಗಳು, ಕಾನೂನು ಪ್ರಾತಿನಿಧ್ಯ ಮತ್ತು ಜಾಗೃತಿಯನ್ನು ಒದಗಿಸಲಾಗಿದೆ.

<><><>

ಕಾನೂನು ಸೇವೆಗಳ ಪ್ರಾಧಿಕಾರಗಳ ಹೊರತಾಗಿ, ಶೀಘ್ರಗತಿ ನ್ಯಾಯಾಲಯ ಇತರೆ ವಿಶೇ ' ನ್ಯಾಯಾಲಯಗಳ ಮೂಲಕ, ನ್ಯಾಯದಾನ ಪ್ರಕ್ರಿಯೆಯನ್ನು, ತ್ವರಿತಗೊಳಿಸಲು, ನ್ಯಾಯಾಂಗ ಕ್ರಮ ಕೈಗೊಂಡಿದೆ.

<><><>

ಕಾನೂನು ಸೇವೆಗಳ ದಿನಾಚರಣೆ ಹಿನ್ನೆಲೆ, ಇಂದು ಬೆಳಗ್ಗೆ 7 ಗಂಟೆಯಿಂದ, ರಾಜ್ಯದ ಹಲವೆಡೆ, ಜನ ಜಾಗೃತಿ ಸೈಕಲ್ ಜಾಥಾಗಳನ್ನು, ಆಯೋಜಿಸಲಾಗಿದೆ. ಜಿಲ್ಲಾವಾರು ಪ್ರಧಾನ ನ್ಯಾಯಾಧೀಶರು, ಚಾಲನೆ ನೀಡಲಿದ್ದಾರೆ.

<><><>

ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಹಾಗೂ ನ್ಯಾ 'ನಲ್ ಇನೋವೇಶನ್ ಫೌಂಡೇಶನ್ – ಇಂಡಿಯಾ, ಪ್ರೌಢ ಶಾಲಾ ವಿದ್ಯಾರ್ಥಿಗಳಲ್ಲಿ, ವೈಜ್ಞಾನಿಕ ಚಿಂತನೆ, ನಾವೀನ್ಯತೆ ಅನ್ವೇ 'ಣೆ, ಸೃಜನಶೀಲತೆ ಮತ್ತು ನವೀನ ಆವಿ ಷ್ಕಾರಗಳ ಮನೋಭಾವ ಬೆಳೆಸಲು ಆಯೋಜಿಸಿದ್ದ, ರಾಷ್ಟ್ರೀಯ ಸ್ಪರ್ಧೆಯಲ್ಲಿ, ರಾಜ್ಯದ 9 ಪ್ರತಿಭಾವಂತ ವಿದ್ಯಾರ್ಥಿಗಳು, ಜಪಾನ್‌ನಲ್ಲಿ ಆಯೋಜಿತ, ಅಂತಾರಾಷ್ಟ್ರೀಯ ಅಕುರಾ ವಿಜ್ಞಾನ ಸಮ್ಮೇಳನಕ್ಕೆ, ಆಯ್ಕೆಯಾಗಿದ್ದಾರೆ.

<><><>

ಈ ಕುರಿತು, ಒಂದು ವರದಿ..

<><><>

INSPIRE–MANAK - Million Minds Augmenting National Aspiration and Knowledge, ರಾಜ್ಯ ನೋಡಲ್ ಅಧಿಕಾರಿ ಮತ್ತು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ, ಹಿರಿಯ ಸಹಾಯಕ ನಿರ್ದೇಶಕಿ ಶಿವಮ್ಮ ಅವರು ಆಕಾಶವಾಣಿಗೆ ವಿಷಯ ತಿಳಿಸಿ, ಆವಿ ಷ್ಕಾರ, ಹೊಸತನ, ಸಾಮಾಜಿಕ ಉಪಯುಕ್ತತೆ, ಪರಿಸರ ಸ್ನೇಹಿ ಗುಣ, ಬಳಕೆದಾರ ಸ್ನೇಹಿತ್ವ, ಪ್ರಸ್ತುತ ಲಭ್ಯ ಪರಿಹಾರಗಳಿಗಿಂತ, ಹೆಚ್ಚಿನ ಪ್ರಯೋಜನ ಹಾಗೂ ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳುವ ಸಾಧ್ಯತೆಯ ಆಧಾರದ ಮೇಲೆ, 9 ಮಾದರಿಗಳನ್ನು ಆಯ್ಕೆ ಮಾಡಲಾಗಿದೆ ಎಂದರು. ಶಾಲಾ ಮಕ್ಕಳ ಕಲ್ಪನೆಯನ್ನು, ಕೇವಲ ಮಾದರಿಯಾಗಿ ಉಳಿಸದೇ, ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ, ನವೀನ ಆವಿ ಷ್ಕಾರವಾಗಿ ರೂಪಿಸುವ ವೇದಿಕೆಯೇ – INSPIRE–MANAK. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕ, ಕೆ.ಜಿ. ರಂಗಯ್ಯ.

<><><>

ಶ್ರೀಧರ ಹೆಗಡೆ (47) + ಕೆ.ಜಿ. ರಂಗಯ್ಯ (60)

<><><>

ಜಪಾನ್‌ನಲ್ಲಿ ಆಯೋಜಿತ, ಅಂತಾರಾಷ್ಟ್ರೀಯ ಅಕುರಾ ವಿಜ್ಞಾನ ಸಮ್ಮೇಳನಕ್ಕೆ ಆಯ್ಕೆಯಾಗಿರುವ, ಉಡುಪಿಯ ವಿದ್ಯೋದಯ ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯದ, ಪ್ರಥಮ ವರ್ಷದ ವಿದ್ಯಾರ್ಥಿ, ಕೆ.ಪ್ರವೀರರಾಜ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಮಾದರಿ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಕೆ.ಪ್ರವೀರ ರಾಜ ಧ್ವನಿ 28 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು, ದೀಪಾವಳಿ ಅಮಾವಾಸ್ಯೆ. ಸೋಮಾವತಿ ಅಮಾವಾಸ್ಯೆ ಎಂದೂ ಕರೆಯಲಾಗುತ್ತದೆ. ಕಾರ್ತಿಕ ಮಾಸದ ಆರಂಭ. ಸಂಪತ್ತು, ಸಮೃದ್ಧಿ ಮತ್ತು ಸುಖ, ಶಾಂತಿಗಾಗಿ, ಲಕ್ಷ್ಮೀ ದೇವಿಯನ್ನು ಆರಾಧಿಸಲಾಗುತ್ತದೆ.

<><><>

ನಾಳೆ, ಮಂಗಳವಾರ ಗೋ ಪೂಜೆ ಹಾಗೂ ಬಲಿಪಾಡ್ಯಮಿ ಆಚರಣೆ ನಡೆಯಲಿದೆ. ಗೋ ಪೂಜೆಯನ್ನು ಗೋವರ್ಧನ ಪೂಜೆ ಎಂದೂ ಕರೆಯಲಾಗುತ್ತದೆ. ಈ ದಿನ ಬಲಿಚಕ್ರವರ್ತಿಯು ಭೂಮಿಗೆ ಆಗಮಿಸುತ್ತಾನೆ ಎಂಬ ನಂಬಿಕೆಯಿದೆ. ಜನರು ಗೋವುಗಳಿಗೆ ಪೂಜೆ ಸಲ್ಲಿಸುವುದರ ಜೊತೆಗೆ, ಶ್ರೀಕೃ ್ಣನನ್ನು ಆರಾಧಿಸುತ್ತಾರೆ.

<><><>

ದೀಪಾವಳಿ ಹಬ್ಬದ, ಸಾಂಪ್ರದಾಯಿಕ ಆಚರಣೆಯ ಮಹತ್ವ ಕುರಿತು, ಮಾಹಿತಿ ನೀಡಿದ್ದಾರೆ, ಖ್ಯಾತ ಜಾನಪದ ವಿದ್ವಾಂಸ, ಹುಬ್ಬಳ್ಳಿಯ ಡಾಕ್ಟರ್ ರಾಮಣ್ಣ ಮೂಲಗಿ.

<><><>

ಡಾಕ್ಟರ್ ರಾಮಣ್ಣ ಮೂಲಗಿ ಧ್ವನಿ (43) ಸೆಕೆಂದುಗಳು

<><><>

ದೀಪಾವಳಿ ಹಬ್ಬದ ಹಿನ್ನೆಲೆ, ಹೆಚ್ಚು ಸದ್ದು ಮತ್ತು ಮಾಲಿನ್ಯ ಉಂಟು ಮಾಡುವ, ಪಟಾಕಿಗಳ ಮಾರಾಟ ಮತ್ತು ಬಳಕೆಯನ್ನು, ಸಂಪೂರ್ಣ ನಿ ೇಧಿಸಲಾಗಿದೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ, ದೀಪಾವಳಿ ಹಬ್ಬದ ಸಂದರ್ಭದಲ್ಲಿ, ರಾತ್ರಿ 8 ಗಂಟೆಯಿಂದ 10 ಗಂಟೆಯ ವರೆಗೆ ಮಾತ್ರ, ಹಸಿರು ಪಟಾಕಿಗಳನ್ನು ಸಿಡಿಸಲು ಅವಕಾಶ ನೀಡಲಾಗಿದೆ.

ಈ ನಿಟ್ಟಿನಲ್ಲಿ, ಆಯಾ ಜಿಲ್ಲಾಧಿಕಾರಿಗಳು, ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ. ನಿಶ್ಯಬ್ದ ವಲಯಗಳೆಂದು ಘೋಷಿಸಲ್ಪಟ್ಟಿರುವ, ಆಸ್ಪತ್ರೆ, ಶಾಲೆ, ಪ್ರಾರ್ಥನಾ ಮಂದಿರ ಇತ್ಯಾದಿಗಳ ಸುತ್ತಮುತ್ತಲಿನ ಪ್ರದೇಶದಲ್ಲಿ, ಬೆಳಗಿನ ಸಮಯದಲ್ಲಿ, ನಿ ೇಧಿತ ಪಟಾಕಿಗಳನ್ನು ಬಳಸದಂತೆ, ಸೂಚಿಸಲಾಗಿದೆ.

<><><>

ಚಾಮರಾಜನಗರ, ಜಾನಪದ ನೆಲೆಗಟ್ಟಿನ ಜಿಲ್ಲೆ. ಬೆಳಕಿನ ಹಬ್ಬ ದೀಪಾವಳಿ ಸಂದರ್ಭದಲ್ಲಿ, ಚೆನ್ನಾಗಿ ಒಣಗಿದ, ಪಂಜಿನ ಕಡ್ಡಿಗಳನ್ನು ತಂದು, ಅದಕ್ಕೆ ವಿಶಿ ್ಟ ಪೂಜೆ ಸಲ್ಲಿಸಿ, ಕತ್ತಲೆ ಸಮೀಪಿಸುತ್ತಿದ್ದಂತೆ, ಪಂಜು ಹಚ್ಚಿ ಬೆಳಗಿಸುವುದರ ಮೂಲಕ, ವಿಭಿನ್ನವಾಗಿ ಬುಡಕಟ್ಟು ಸಮುದಾಯಗಳು, ಆಚರಿಸುತ್ತವೆ. ಆ ಮೂಲಕ, ತಮ್ಮ ಹಿರೀಕರ, ಕತ್ತಲೆಯಿಂದ ಬೆಳಕಿನೆಡೆಗೆ, ಅರಿವಿನ ದೀವಿಟಿಗೆ ಅನ್ವೇಷಿಸುವ ವಾಡಿಕೆ, ಈ ಆಚರಣೆಯ ಹಿಂದಿದೆ.

<><><>

ಚಿಕ್ಕಮಗಳೂರು ಜಿಲ್ಲೆ, ಬಿಂಡಿಗ ದೇವಿರಮ್ಮ ಬೆಟ್ಟದಲ್ಲಿ, ಭಾನುವಾರ ಮಧ್ಯಾಹ್ನ ಬೆಟ್ಟ ಏರುವ ಮಾರ್ಗದಲ್ಲಿ ಕಟ್ಟಲಾಗಿದ್ದ, ಹಗ್ಗ ತುಂಡಾದ ಪರಿಣಾಮ, 20ಕ್ಕೂ ಹೆಚ್ಚು ಭಕ್ತಾದಿಗಳು, ಗಾಯಗೊಂಡಿದ್ದಾರೆ. ಆ ಪೈಕಿ, 8 ಜನರಿಗೆ ಗಂಭೀರ ಗಾಯಗಳಾಗಿದೆ. ಗಾಯಗೊಂಡವರನ್ನು, ಚಿಕ್ಕಮಗಳೂರಿನ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಧಾನ ಪರಿಷತ್ ಸದಸ್ಯ, ಡಾಕ್ಟರ್ ಸಿ.ಟಿ. ರವಿ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು. ಘಟನೆಯ ಕುರಿತು, ಮಾಹಿತಿ ಪಡೆದರು.

<><><>

ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ, ಸಾರ್ವತ್ರಿಕ ಚುನಾವಣೆಗೆ, ರಾಜ್ಯ ಚುನಾವಣಾ ಆಯೋಗ, ಸಿದ್ಧತೆ ಆರಂಭಿಸಿದೆ. ರಾಜ್ಯದ ಎಲ್ಲ 31 ಜಿಲ್ಲಾಧಿಕಾರಿಗಳಿಗೆ, ಚುನಾವಣಾಧಿಕಾರಿಗಳನ್ನು ನೇಮಿಸುವಂತೆ, ಆಯೋಗ ಸೂಚಿಸಿದೆ. ಪಂಚಾಯಿತಿ ರಾಜ್ ಚುನಾವಣೆ ಕಾಯ್ದೆ–1993ರ, ನಿಯಮ 6ರ ಅನ್ವಯ, ಜಿಲ್ಲಾ ಪಂಚಾಯಿತಿ ಚುನಾವಣೆಗೆ, ಪ್ರತಿ ತಾಲೂಕಿನ 10 ಕ್ಷೇತ್ರಗಳ ವರೆಗೆ, ಓರ್ವ ಉಪ ವಿಭಾಗಾಧಿಕಾರಿಯನ್ನು ಚುನಾವಣಾಧಿಕಾರಿಯಾಗಿ, ತಾಲೂಕು ಪಂಚಾಯಿತಿ ಚುನಾವಣೆಗೆ, ಸರಾಸರಿ 15 ಕ್ಷೇತ್ರಗಳಿಗೆ ಒಬ್ಬರಂತೆ, ತಹಸೀಲ್ದಾರ ಹುದ್ದೆಯ ಅಧಿಕಾರಿಯನ್ನು ಚುನಾವಣಾಧಿಕಾರಿಯಾಗಿ ನೇಮಿಸಲು, ಸೂಚಿಸಿದೆ. ನಿಗದಿತ ನಮೂನೆಯಲ್ಲಿ, ಈ ತಿಂಗಳ 16ನೇ ತಾರೀಖಿನ ಒಳಗೆ, ಆಯೋಗದ ಅನುಮೋದನೆಗಾಗಿ ಪ್ರಸ್ತಾವ ಸಲ್ಲಿಸಲು, ರಾಜ್ಯ ಚುನಾವಣಾ ಆಯೋಗದ, ಅಧೀನ ಕಾರ್ಯದರ್ಶಿ, ಪಿ.ಎಸ್. ಮರಬಳ್ಳಿ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಎಲ್ಲರಿಗೂ ನ್ಯಾಯ; ಸನ್ನಿವೇಶ ಏನೇ ಇರಲಿ', ಧ್ಯೇಯದೊಂದಿಗೆ, ಇಂದು 'ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ.
- ಇನ್‌ಸ್ಪೈರ್ ಮಾನಕ್: ಜಪಾನಿನ ಅಂತಾರಾಷ್ಟ್ರೀಯ ವಿಜ್ಞಾನ ಸಮ್ಮೇಳನಕ್ಕೆ, ರಾಜ್ಯದ 9 ವಿದ್ಯಾರ್ಥಿಗಳು ಆಯ್ಕೆ.
- ಇಂದು, ದೀಪಾವಳಿ ಸೋಮಾವತಿ ಅಮಾವಾಸ್ಯೆ; ಕಾರ್ತಿಕ ಮಾಸದ ಆರಂಭ.
- ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಗೆ, ಚುನಾವಣಾ ಆಯೋಗದಿಂದ, ಸಿದ್ಧತೆ ಆರಂಭ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>